ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾವು ಹಣ ವಸೂಲು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಮೆಡಿಕಲ್ ಕಾಲೇಜ್‌ಗಳಿಗೆ ಸೀಟ್ ಕೊಡುವ ಅಧಿಕಾರ ಅವರ ಕೈಯಲ್ಲಿ ಇದೆ. ಆ ಒಂದು ಅಧಿಕಾರ ನಮ್ಮ ಕೈಯಲ್ಲಿ ಇಲ್ಲ. ಆದ್ದರಿಂದ ಅವರು ಬೇಕಾದರೆ ಹಣ ಮಾಡಬಹುದು. ಇದರಿಂದ ನಮಗೇನು ಪ್ರಯೋಜನವಾಗುವುದಿಲ್ಲ.

ಶ್ರೀ ಜಿ. ಬಿ. ಶಂಕರ್‌ರಾವ್.—ನಾವು ಅಧಿಕಾರದಲ್ಲಿದ್ದುಕೊಂಡು ಒಳ್ಳೆಯ ಕೆಲಸವನ್ನು ಮಾಡುತ್ತೇವೆ. ಆದರೆ ಈಗ ಹಣ ಬೇಕಾಗಿರುವುದು ನಿಮಗೆ, ಕಾರಣವೇನೆಂದರೆ, ಚುನಾವಣೆಗೆ ಹೋಗ ಬೇಕಾದರೆ ಹಣ ಬೇಕಾಗುತ್ತದೆ. ಜನರು ನಮಗೆ ಮತವನ್ನು ಕಳೆದ ಚುನಾವಣೆಯಲ್ಲಿ ಪ್ರೀತಿಯಿಂದ ಕೊಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚುನಾವಣೆಗೆ ಹೋದರೆ ಜನರು ನಮಗೆ ಒಳ್ಳೆಯ ಸ್ವಾಗತ ಕೋರಿ ಮತ ಕೊಡುತ್ತಾರೆ.

ಶ್ರೀ ಮೈಕೇಲ್ ಬಿ ಫರ್ನಾಂಡೀಸ್.—ಮಾನ್ಯ ಮಂತ್ರಿಗಳು ಈ ಕಡೆ ಇದ್ದಾಗ ಚೆನ್ನಾಗಿದ್ದರು. ಆ ಕಡೆ ಹೋಗಿ ಈ ರೀತಿ ಆಗಿದೆ.

ಶ್ರೀ ಜಿ. ಬಿ. ಶಂಕರರಾವ್.—ತಾವು ನನ್ನನ್ನು ಕೈಬಿಟ್ಟು ತಮ್ಮ ಪರಿಸ್ಥಿತಿ ಈಗ ಅಧೋಗತಿಗೆ ಇಳಿದಿದೆ. ನನ್ನನ್ನು ಗಂರುವೇ ಎಂದು ಕರೆಯುತ್ತಿದ್ದರು.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಮಂತ್ರಿಗಳ ಕೈಯಲ್ಲಿ ಕಾಲೇಜುಗಳಿಗೆ ಅಫಿಲಿಯೇಷನ್ ಕೊಡುವುದನ್ನು ಅಧಿಕಾರ ಇಟ್ಟುಕೊಂಡಿದ್ದಾರೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾವು ಯಾವ ಸಭೆಯನ್ನು ಸಹ ಕರೆದಿಲ್ಲ. ಆ ರೀತಿಯಾಗಿ ಕರೆಯುವುದಕ್ಕೂ ಸಹ ಆಗುವುದಿಲ್ಲ. ಆ ವಿಷಯವೇ ನನಗೆ ಗೊತ್ತಿಲ್ಲ. ಇದನ್ನು ಮಾನ್ಯ ಸದಸ್ಯರು ಕಲ್ಪನೆ ಮಾಡಿಕೊಂಡು ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದ ಸಂಗತಿ. ಕೆಲವು ಕಾಲೇಜುಗಳಿಗೆ ಸ್ಪೆಷಲ್ ಕೋರ್ಸ್‌ಗಳಿಗೆ ಮಾತ್ರ ನಾವು ಪರ್ಮಿಷನ್ ಕೊಟ್ಟಿದ್ದೇವೆ. ಅದನ್ನು ಬಿಟ್ಟರೆ ಸರ್ಕಾರ ಬೇರೆ ಯಾವುದಕ್ಕೂ ಸಹ ಅನುಮತಿ ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಹೈಕೋರ್ಟಿನಲ್ಲಿರುವ ತಡೆಯಾಜ್ಞೆಯನ್ನು ವೇಕೇಟ್ ಮಾಡಿಸಿ ಆದಷ್ಟು ಜಾಗ್ರತೆ ಜಾರಿಗೆ ಕೊಡುವುದಕ್ಕೆ ಅವರು ಪ್ರಯತ್ನ ಮಾಡುತ್ತಾರೆಯೇ?

SRI G B. SHANKARA RAO.—I will put all my efforts to see that the stay is vacated.

(ii) Re.—Hardship caused to the students belonging to special group in admission to School and Colleges.

SRI SHEERNALY CHANDRASEKHAR— Sir, I call the attention of the Minister for Education about the hardship caused to the students belonging to special group in admission to schools and colleges and for the award of scholarships by insisting that the income limit is Rs. 3,800 though the income limit has been Raised to Rs.6,000

SRI G. B. SHANKARA RAO.—Sir, I wish to make the following statement.

The income limit for people to be categorised as Members of the Special Group is Rs. 4,800 per year and not Rs. 3,800 as mentioned in the Calling Attention notice. No decision has been taken to raise the income limit to Rs. 6,000 per year. Members of the Special

Group are entitled to have 15% of seats reserved for them in educational institutions and 15% of vacancies in Government jobs reserved for them.

The Income limit prescribed for awarding the National loan Scholarship and merit scholarship, is Rs. 6,000 per annum. This limited is applicable for all the students irrespective of categories of persons.

For students whose parents income is Rs. 3,600 per anum, are exempted from tution and Laboratary Fees, (except SC/ST/BTS).

For students whose parents income is Rs. 4,800 per anum, will be awared poverty-cum-progress scholarship irrespective of categories of persons.

No complaints have been received by the Government so far about any hardships caused to the members of the Special Group. If any specific complaints are brought to the notice of Government, they will be looked into

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ತಮ್ಮ ಹೇಳಿಕೆಯಲ್ಲಿ ವಾರ್ಷಿಕ ವರಮಾನ ಸುಮಾರು ೪೮೦ ರೂಪಾಯಿಗಳು ಎಂದು ಹೇಳಿದ್ದಾರೆ. ಈಗ ಶಾಲಾ ಕಾಲೇಜುಗಳಲ್ಲಿ ವಾರ್ಷಿಕ ವರಮಾನ ೩೮೦೦ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ಸಾಕು ಎಂದು ಎಲ್ಲಾ ಕಡೆ ಹೇಳುತ್ತಿದ್ದಾರೆ. ಈಗ ನಾಲ್ಕನೆ ದರ್ಜೆಯ ನೌಕರರಿಗೆ ತಿಂಗಳೊಂದಕ್ಕೆ ಸುಮಾರು ೫೦೦ ರೂಪಾಯಿಗಳ ಸಂಬಳ ಬರುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಸರ್ಕಾರದವರು ನಿಗದಿಪಡಿಸಿರುವ ೪೮೦೦ ರೂಪಾಯಿಗಳಿಗಿಂತ ಜಾಸ್ತಿ ಇರಬೇಕೆಂದು ನಾನು ಹೇಳುತ್ತೇನೆ. ಮತ್ತು ತಮ್ಮ ಇಲಾಖೆಯ ಮುಖಾಂತರ ಎಲ್ಲಾ ಶಾಲಾ ಕಾಲೇಜುಗಳಿಗೂ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ ವಾರ್ಷಿಕ ವರಮಾನ ೪೮೦೦ ರೂಪಾಯಿಗಳಿಗಿಂತ ಕಡಿಮೆ ಇರಬೇಕೆಂದು ತಿಳಿಸುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಈ ದಿವಸವೇ ತಂತಿಯ ಮುಖಾಂತರ ಎಲ್ಲಾ ಶಾಲಾ ಕಾಲೇಜುಗಳಿಗೂ ವಾರ್ಷಿಕ ವರಮಾನ ೪೮೦೦ ರೂಪಾಯಿಗಳಿಗಿಂತ ಕಡಿಮೆ ಇರಬೇಕೆಂದು ನಾನು ತಿಳಿಸುತ್ತೇನೆ. ಈಗ ನಿಗದಿ ಮಾಡಿರುವುದನ್ನು ಮತ್ತೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಮುಂದೆ ಆ ರೀತಿ ಏನಾದರೂ ಬದಲಾವಣೆ ಮಾಡುವಂತಹ ಪರಿಸ್ಥಿತಿ ಬಂದರೆ ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಚಂದ್ರ ಶೇಖರ್‌ರವರು ಪ್ರಸ್ತಾಪ ಮಾಡುತ್ತಾ ಹೇಳಿದರು, ಈಗ ಇರುವಂತಹ ಕನಿಷ್ಟ ಮಿತಿ ೪೮೦೦ ರೂಪಾಯಿಗಳನ್ನು ೬೦೦೦ ರೂಪಾಯಿಗಳಿಗೆ ಹೆಚ್ಚು ಮಾಡಿ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದರು. ಆದರೆ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರಿಗೆ ತಿಂಗಳೊಂದಕ್ಕೆ ೫೦೦ ರೂಪಾಯಿಗಳ ಸಂಬಳ ಬರುತ್ತದೆ. ಅಂತಹವರಿಗೆ ೬೦೦೦ ರೂಪಾಯಿಗಳು ಮಾಡಿದರೆ ಪರವಾಗಿಲ್ಲ. ಆದರೆ ಹಳ್ಳಿಗಾಡು ಪ್ರದೇಶಗಳಲ್ಲಿ ವಾಸ ಮಾಡುವಂತಹ ರೈತರ ಮಕ್ಕಳ ಗತಿ ಏನಾಗಬೇಕು, ? ಇದರಿಂದ ರೈತರ ಮಕ್ಕಳಿಗೆ ತೊಂದರೆ ಯಾಗುವುದಿಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—೪,೮೦೦ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇರತಕ್ಕಂತವರು ಲಕ್ಷಾಂತರ ಕೋಟ್ಯಾಂತರ ಜನರು ನಮ್ಮಲ್ಲಿ ಇದ್ದಾರೆ. ಕನಿಷ್ಟ ಮಿತಿಯನ್ನು ಇನ್ನೂ ಕೆಳಕ್ಕೆ ಇಳಿಸಿದರೆ ಸರ್ಕಾರದ ಬೊಕ್ಕಸದ ಹಣವನ್ನೆಲ್ಲಾ ಇದಕ್ಕಾಗಿಯೇ ಇಡಬೇಕಾಗುತ್ತದೆ. ಆದ್ದರಿಂದ ಈಗ ಇರುವ ರೀತಿಯಲ್ಲಿ ಆರ್ಥಿಕವಾಗಿ ತೀರಾ ಯಾರು ಹಿಂದುಳಿದವರಂ ಇದ್ದಾರೆ ಅವರಿಗೆ ಅನುಕೂಲ ವಾಗಲಿ ಎಂದು ೪,೮೦೦ ರೂಪಾಯಿಗಳಿಗೆ ಮಿತಿಯಾಗಿ ಇಟ್ಟಿದ್ದೇವೆ.